## ಪರ್ಯಾಯ ಶೈಕ್ಷಣಿಕ ಯೋಜನೆ 2021–2022

ತರಗತಿ:–4ನೇ     ವಿಷಯ:–ಗಣಿತ     ಘಟಕ:–ಗ್ರಾತ್ರದ ಅಳತೆ     ತಿಂಗಳು:–ಫೆಬ್ರವರಿ 2022

| ಕ್ರ.ಸಂ | ತಿಂಗಳು/ ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | ಫೆಬ್ರವರಿ –22 ಮೊದಲ ನೇ ವಾರ | ಕೊಟ್ಟಿರುವ ಪಾತ್ರೆಯ (ಸಂಗ್ರಾಹಕದ) ಧಾರಣ ಸಾಮರ್ಥ್ಯವನ್ನು 'ಹಿಡಿಪು' ಎಂದು ಗ್ರಹಿಸುವೆ. | **ಚಟುವಟಿಕೆ:01** ಮಕ್ಕಳಿಗೆ ಒಂದು ಸಂಗ್ರಾಹಕದಲ್ಲಿ ಹಿಡಿಯುವ ದ್ರವದ ಪ್ರಮಾಣವನ್ನು ಆ ಸಂಗ್ರಾಹಕದ ಧಾರಣ ಸಾಮರ್ಥ್ಯ/ಹಿಡಿಪು ಎನ್ನುತ್ತೇವೆ ಎಂಬುದನ್ನು ಅರ್ಥೈಸೋಣ.<br>• ಹಾಲು ಮಾರುವವನು ಹಾಲನ್ನು ಯಾವುದರಿಂದ ಅಳೆಯುತ್ತಾನೆ? (ಲೀಟರ್)<br>ದ್ರವವನ್ನು ಲೀಟರ್‌ನಲ್ಲಿ ಅಳತೆ ಮಾಡುತ್ತೇವೆ.<br>1 ಲೀಟರ್ (ಲೀ) = 1000 ಮಿಲಿಲೀಟರ್ (ಮಿಲೀ)<br>• ನಿನಗೆ 500 ಮಿಲೀ ಹಾಲು ಬೇಕಾದರೆ ಕೆಳಗಿನ ಯಾವ ಸಂಗ್ರಾಹಕದಿಂದ(ಪಾತ್ರೆ) ಅಳತೆ ಮಾಡುತ್ತಾರೆ? (500 ಮಿಲೀ)<br><br>1 ಲೀಟರ್ (ಲೀ) = 1000 ಮಿಲಿಲೀಟರ್ (ಮಿಲೀ)<br>$\frac{3}{4}$ಲೀಟರ್ (ಲೀ) = 750 ಮಿಲಿಲೀಟರ್ (ಮಿಲೀ)<br>$\frac{1}{2}$ಲೀಟರ್ (ಲೀ) = 500 ಮಿಲಿಲೀಟರ್ (ಮಿಲೀ) | |
| | | ಲೀಟರ್ ಮತ್ತು ಮಿಲಿಲೀಟರ್‌ಗಳಿಗಿರುವ ಸಂಬಂಧ ತಿಳಿಯುವೆ. | **ಚಟುವಟಿಕೆ:01** ಮಕ್ಕಳಿಗೆ ಲೀಟರ್ ಮತ್ತು ಮಿಲಿಲೀಟರ್‌ಗಳಿಗಿರುವ ಸಂಬಂಧವನ್ನು ಮನವರಿಕೆ ಮಾಡೋಣ.<br>**ಮಾದರಿ:01** 5 ಲೀಟರ್‌ಅನ್ನು ಮಿಲಿಲೀಟರ್‌ಗೆ ಪರಿವರ್ತಿಸು.<br>1 ಲೀ = 1000 ಮಿಲೀ<br>5ಲೀ = 5 $\times$1000<br>= 5000 ಮಿಲೀ<br>**ಮಾದರಿ:02** 2 ಲೀ 400 ಮಿಲೀಗೆ ಪರಿವರ್ತಿಸು.<br>1 ಲೀ = 1000 ಮಿಲೀ<br>2 ಲೀ 400 ಮಿಲೀ = 2 $\times$1000 + 400 | |

| | | | | |
|---|---|---|---|---|
| | ಫೆಬ್ರವರಿ<br>–22<br>ಎರಡನೇ<br>ವಾರ | ಗಾತ್ರದ ಸಂಕಲನ ಮತ್ತು ವ್ಯವಕಲನ ಮಾಡುವೆ. | = 2000 + 400<br>= 2400 ಮಿಲೀ<br>**ಲೀಟರನ್ನು ಮಿಲಿಲೀಟರ್‌ಗೆ ಪರಿವರ್ತಿಸಲು 1000 ರಿಂದ ಗುಣಿಸಬೇಕು.**<br>➢ ಮಕ್ಕಳಿಗೆ ಅಭ್ಯಾಸ ಹಾಳೆ–01 ರಲ್ಲಿನ ಲೆಕ್ಕಗಳನ್ನು ಮಾಡುವಂತೆ ತಿಳಿಸೋಣ.<br>**ಚಟುವಟಿಕೆ:02** ಮಕ್ಕಳಿಗೆ ಮಿಲೀಲೀಟರ್‌ನ್ನು ಲೀಟರ್‌ಗೆ ಪರಿವರ್ತಿಸುವುದನ್ನು ಮನವರಿಕೆ ಮಾಡೋಣ.<br>**ಮಾದರಿ:01** 4000 ಮಿಲೀನ್ನು ಲೀಟರ್‌ಗೆ ಪರಿವರ್ತಿಸು.<br>4000 ಮಿಲೀ<br>1000 ಮಿಲೀ = 1 ಲೀಟರ್<br>4000 ಮಿಲೀ = $\frac{4000}{1000}$ = 4 ಲೀ<br>**ಮಾದರಿ:02** 3750 ಮಿಲಿಲೀಟರ್‌ನ್ನು ಲೀಟರ್‌ಗೆ ಪರಿವರ್ತಿಸು.<br>3750 = 3000 + 750<br>= $\frac{3000}{1000}$ + 750<br>= 3 ಲೀ 750 ಮಿಲೀ<br>**ಮಿಲಿಲೀಟರ್‌ಅನ್ನು ಲೀಟರ್‌ಗೆ ಪರಿವರ್ತಿಸಲು 1000 ರಿಂದ ಭಾಗಿಸಬೇಕು.**<br>➢ ಮಕ್ಕಳಿಗೆ ಅಭ್ಯಾಸ ಹಾಳೆ–02 ರಲ್ಲಿನ ಲೆಕ್ಕಗಳನ್ನು ಮಾಡುವಂತೆ ತಿಳಿಸೋಣ.<br>**ಚಟುವಟಿಕೆ:01** ಮಕ್ಕಳಿಗೆ ಗಾತ್ರದ ಸಂಕಲನ ಮತ್ತು ವ್ಯವಕಲನ ಮಾಡುವುದನ್ನು ಅರ್ಥೈಸೋಣ.<br>**ಮಾದರಿ:01** ರೀಟಾ ದಿನದಲ್ಲಿ ಬೆಳಗ್ಗೆ 1 ಲೀ 500 ಮಿಲೀ ನೀರನ್ನು ಕುಡಿಯುತ್ತಾಳೆ. ಮಧ್ಯಾಹ್ನ 2 ಲೀ 100 ಮಿಲೀ ಮತ್ತು ರಾತ್ರಿ 1 ಲೀ 700 ಮಿಲೀ ನೀರನ್ನು ಕುಡಿಯುತ್ತಾಳೆ. ರೀಟಾ ಆ ದಿನಕ್ಕೆ ಕುಡಿದ ಒಟ್ಟು ನೀರಿನ ಪ್ರಮಾಣ ಎಷ್ಟು?<br>ಬೆಳಗ್ಗೆ ಕುಡಿದ ನೀರಿನ ಗಾತ್ರ =1 ಲೀ 500 ಮಿಲೀ<br>ಮಧ್ಯಾಹ್ನ ಕುಡಿದ ನೀರಿನ ಗಾತ್ರ=2 ಲೀ 100 ಮಿಲೀ<br>ರಾತ್ರಿ ಕುಡಿದ ನೀರಿನ ಗಾತ್ರ=1 ಲೀ 700 ಮಿಲೀ<br>ಒಟ್ಟು ಕುಡಿದ ನೀರಿನ ಗಾತ್ರ=5 ಲೀ 300 ಮಿಲೀ<br>➢ ಮಕ್ಕಳಿಗೆ ಅಭ್ಯಾಸ ಹಾಳೆ–03 ರಲ್ಲಿನ ಲೆಕ್ಕಗಳನ್ನು ಮಾಡುವಂತೆ ತಿಳಿಸೋಣ.<br>**ಮಾದರಿ:02** ಶುಭಾ ತನ್ನ ಹೋಟೆಲ್‌ಗೆ 5 ಲೀ 500 ಮಿಲೀ ಹಾಲನ್ನು ಕೊಳ್ಳುತ್ತಾಳೆ.ಅದರಲ್ಲಿ 3 ಲೀ 400 ಮಿಲೀ ಹಾಲನ್ನು ಟೀ ತಯಾರಿಸಲು ಬಳಸುತ್ತಾಳೆ. ಉಳಿದ ಹಾಲಿನ ಪ್ರಮಾಣ ಎಷ್ಟು? | ಅಭ್ಯಾಸ ಹಾಳೆ–01<br>ಅಭ್ಯಾಸ ಹಾಳೆ–02<br>ಅಭ್ಯಾಸ ಹಾಳೆ–03 |

| | | | | |
|---|---|---|---|---|
| | | | ಶುಭಾ ಕೊಂಡ ಹಾಲಿನ ಪ್ರಮಾಣ = 5 ಲೀ 500 ಮಿಲೀ<br>ಟೀ ಗೆ ಬಳಸಿದ ಹಾಲಿನ ಪ್ರಮಾಣ = –3 ಲೀ 400 ಮಿಲೀ<br>ಉಳಿದ ಹಾಲಿನ ಪ್ರಮಾಣ = 2 ಲೀ 100 ಮಿಲೀ<br>➢ ಮಕ್ಕಳಿಗೆ ಅಭ್ಯಾಸ ಹಾಳೆ–04 ರಲ್ಲಿನ ಲೆಕ್ಕಗಳನ್ನು ಮಾಡುವಂತೆ ತಿಳಿಸೋಣ. | ಅಭ್ಯಾಸ ಹಾಳೆ–04 |
| | | **ಕಾಲ**<br>ಒಂದು ವರ್ಷದಲ್ಲಿನ ದಿನಗಳು ಹಾಗೂ ವಾರಗಳ ಸಂಖ್ಯೆಗಳನ್ನು ಲೆಕ್ಕಾಚಾರ ಮಾಡುವೆ. | **ಚಟುವಟಿಕೆ:01** ಮಕ್ಕಳಿಗೆ ಒಂದು ವರ್ಷದಲ್ಲಿನ ದಿನಗಳು ಹಾಗೂ ವಾರಗಳ ಸಂಖ್ಯೆಗಳನ್ನು ಅರ್ಥೈಸೋಣ.<br>1 ವಾರ = 7 ದಿನ<br>1 ತಿಂಗಳು = 30/31 ದಿನ<br>12 ತಿಂಗಳು = 1 ವರ್ಷ<br>1 ವರ್ಷ = 52 ವಾರ | |
| | | ಅಧಿಕ ವರ್ಷಕ್ಕೆ ಕಾರಣ ತಿಳಿಯುವೆ. | **ಚಟುವಟಿಕೆ:02** ಮಕ್ಕಳಿಗೆ ಅಧಿಕ ವರ್ಷಕ್ಕೆ ಕಾರಣವನ್ನು ಅರ್ಥೈಸೋಣ.<br>• ಒಂದು ವರ್ಷಕ್ಕೆ ಎಷ್ಟು ದಿನಗಳು? (365)<br>• ನಿಖರವಾಗಿ ಒಂದು ವರ್ಷಕ್ಕೆ<br>365 ದಿನ 6 ಗಂಟೆ ಅಂದರೆ $365\frac{1}{4}$ ದಿನ. ಆದರೆ 1 ವರ್ಷಕ್ಕೆ 365 ದಿನ ಎಂದು ಪರಿಗಣಿದಾಗ ಉಳಿದ $\frac{1}{4}$ ದಿನವನ್ನು 4 ಬಾರಿ ಕೂಡಿದಾಗ $\frac{1}{4}+\frac{1}{4}+\frac{1}{4}+\frac{1}{4}=1$ ದಿನ<br>ಪ್ರತಿ ನಾಲ್ಕನೇ ವರ್ಷಕ್ಕೆ 365+1 = 366 ದಿನಗಳಾಗುತ್ತವೆ.<br>ಆ ವರ್ಷದ ಫೆಬ್ರವರಿ ತಿಂಗಳಲ್ಲಿ 29 ದಿನಗಳಿರುತ್ತವೆ. ಇದನ್ನೇ ಅಧಿಕ ವರ್ಷವೆಂದು ಕರೆಯುತ್ತೇವೆ.<br>➢ ಮಕ್ಕಳಿಗೆ ಅಭ್ಯಾಸ ಹಾಳೆ–05 ರಲ್ಲಿನ ಲೆಕ್ಕಗಳನ್ನು ಮಾಡುವಂತೆ ತಿಳಿಸೋಣ. | ಅಭ್ಯಾಸ ಹಾಳೆ–05 |
| | ಫೆಬ್ರವರಿ –22 ಮೂರನೆ ಯ ವಾರ | ಗಡಿಯಾರದ ಸಮಯವನ್ನು ಹತ್ತಿರದ ಗಂಟೆ ಮತ್ತು ನಿಮಿಷಗಳಲ್ಲಿ ಓದುವೆ. | **ಚಟುವಟಿಕೆ:01** ಮಕ್ಕಳಿಗೆ ಗಡಿಯಾರದ ಸಮಯವನ್ನು ಗಂಟೆ ಮತ್ತು ನಿಮಿಷಗಳಲ್ಲಿ ಓದುವುದನ್ನು ಮನವರಿಕೆ ಮಾಡೋಣ.<br>ಮಕ್ಕಳಿಗೆ ಈಗಾಗಲೇ ಕಲಿತಿರುವುದನ್ನು ಸ್ಮರಿಸೋಣ.<br>1) ಗಡಿಯಾರದ ದೊಡ್ಡಮುಳ್ಳು ಏನನ್ನು ಸೂಚಿಸುತ್ತದೆ? (ಗಂಟೆ)<br>2) ಗಡಿಯಾರದ ಚಿಕ್ಕಮುಳ್ಳು ಏನನ್ನು ಸೂಚಿಸುತ್ತದೆ? (ನಿಮಿಷ)<br>3) ಗಡಿಯಾರದ ಡಯಲ್‌ನ್ನು ಎಷ್ಟು ಸಮಭಾಗಗಳಾಗಿ ಮಾಡಲಾಗಿದೆ? (12)<br>4) ಒಂದು ಗಂಟೆಗೆ ಎಷ್ಟು ನಿಮಿಷ? (60)<br>5) ಒಂದು ನಿಮಿಷಕ್ಕೆ ಎಷ್ಟು ಸೆಕೆಂಡ್? (60)<br>**ಮಾದರಿ:01** ಗಡಿಯಾರ ತೋರಿಸುತ್ತಿರುವ ಸಮಯ ಓದಿ ಬರೆ.<br><br>3 : 40 (3 ಗಂಟೆ ನಲವತ್ತು ನಿಮಿಷ)<br>**ಮಾದರಿ:02** ಗಡಿಯಾರ ತೋರಿಸುತ್ತಿರುವ ಸಮಯ ಓದಿ ಬರೆ. | |

| | | | | |
|---|---|---|---|---|
| | | | <br>4 :45 (4 ಗಂಟೆ ನಲವತ್ತೈದು ನಿಮಿಷ)<br>ಇದನ್ನು ಭಿನ್ನರಾಶಿ ಕಲ್ಪನೆ ಬಳಸಿ ಹೇಳುವುದಾದರೆ $4\frac{3}{4}$ ಗಂಟೆ (4 ಮುಕ್ಕಾಲು ಗಂಟೆ ಎಂದು ಓದುತ್ತೇವೆ)<br>➢ ಮಕ್ಕಳಿಗೆ ಅಭ್ಯಾಸ ಹಾಳೆ-06 ರಲ್ಲಿನ ಲೆಕ್ಕಗಳನ್ನು ಮಾಡುವಂತೆ ತಿಳಿಸೋಣ. | ಅಭ್ಯಾಸ ಹಾಳೆ-06 |
| | | ಸಮಯವನ್ನು ಪೂರ್ವಾಹ್ನ ಮತ್ತು ಅಪರಾಹ್ನಗಳಲ್ಲಿ ವ್ಯಕ್ತಪಡಿಸುವೆ. | **ಚಟುವಟಿಕೆ:01** ಮಕ್ಕಳಿಗೆ ಸಮಯವನ್ನು ಪೂರ್ವಾಹ್ನ ಮತ್ತು ಅಪರಾಹ್ನಗಳಲ್ಲಿ ವ್ಯಕ್ತಪಡಿಸುವುದನ್ನು ತಿಳಿಸೋಣ.<br>• ಮಧ್ಯರಾತ್ರಿ 12 ಗಂಟೆಯಿಂದ ಮಧ್ಯಾಹ್ನ 12 ಗಂಟೆವರೆಗಿನ ಸಮಯವನ್ನು ನಾವು ಪೂರ್ವಾಹ್ನ (am) ಎಂದುಕರೆಯುತ್ತೇವೆ.<br>• ಮಧ್ಯಾಹ್ನ 12 ಗಂಟೆಯಿಂದ ಮಧ್ಯರಾತ್ರಿ 12ರ ವರೆಗಿನ ಸಮಯವನ್ನುಅಪರಾಹ್ನ | |
| | ಫೆಬ್ರವರಿ -22 ನಾಲ್ಕನೇ ವಾರ | ಸಮಯವನ್ನು 24 ಗಂಟೆ ಗಡಿಯಾರದಲ್ಲಿ ಓದುವೆ. | **ಚಟುವಟಿಕೆ:01**ಮಕ್ಕಳಿಗೆ ಸಮಯವನ್ನು 24 ಗಂಟೆ ಗಡಿಯಾರದಲ್ಲಿ ಓದುವುದನ್ನು ಅರ್ಥೈಸೋಣ.<br>• ವೇಳೆಯು 13 ಗಂಟೆ ಅಥವಾ ಅದಕ್ಕಿಂತ ಹೆಚ್ಚು ಇದ್ದಾಗ ಅದನ್ನು 12 ರಿಂದ ಕಳೆದು ಉಳಿಕೆ ಸಮಯವನ್ನು ಅಪರಾಹ್ನ (pm)ಎಂದು ಬರೆಯುತ್ತೇವೆ.<br>• ವೇಳೆಯು 12 ಗಂಟೆಗಿಂತ ಹೆಚ್ಚು ಹಾಗೂ 13 ಗಂಟೆಗಿಂತ ಕಡಿಮೆ ಇದ್ದಾಗ ಅದನ್ನು ಹಾಗೆಯೇ ಇರಿಸಿ ಅಪರಾಹ್ನ (pm)ಎನ್ನುತ್ತೇವೆ.<br>• ವೇಳೆಯು 12 ಗಂಟೆಗಿಂತ ಕಡಿಮೆ ಇದ್ದಾಗ ಅದನ್ನು ಹಾಗೆಯೇ ಬರೆದು ಪೂರ್ವಾಹ್ನ (am)ಎಂದು ಬರೆಯುತ್ತೇವೆ.<br>**ಮಾದರಿ:01** ರೈಲು ವೇಳಾಪಟ್ಟಿಯಲ್ಲಿ ಹೊರಡುವ ಸಮಯ 17 ಗಂಟೆ ಎಂದು ನಮೂದಿಸಿದೆ. 12 ಗಂಟೆ ಗಡಿಯಾರದಲ್ಲಿ ಸಮಯವೆಷ್ಟು?<br>ರೈಲು ಹೊರಡುವ ವೇಳೆ = 17 – 12<br>= 5 pm (ಅಪರಾಹ್ನ 5 ಗಂಟೆ)<br>➢ ಮಕ್ಕಳಿಗೆ ಅಭ್ಯಾಸ ಹಾಳೆ-07 ರಲ್ಲಿನ ಲೆಕ್ಕಗಳನ್ನು ಮಾಡುವಂತೆ ತಿಳಿಸೋಣ. | ಅಭ್ಯಾಸ ಹಾಳೆ-07 |
| | | ಎರಡು ದಿನಾಂಕಗಳ ನಡುವಿನ | **ಚಟುವಟಿಕೆ:01**ಮಕ್ಕಳಿಗೆ ಎರಡು ದಿನಾಂಕಗಳ ನಡುವಿನ ದಿನಗಳನ್ನು ಲೆಕ್ಕಾಚಾರ ಮಾಡುವುದನ್ನು ಅರ್ಥೈಸೋಣ. | |

ದಿನಗಳನ್ನು ಲೆಕ್ಕಾಚಾರ ಮಾಡುವೆ.

**ಮಾದರಿ:01**ಕೋವಿಡ್ ಪ್ರಯುಕ್ತ ಶಾಲೆಗೆ ಜೂನ್ 1 ರಿಂದ ರಜೆ ಘೋಷಿಸಲಾಗಿತ್ತು. ರಜೆಯ ನಂತರ ಜೂನ್ 23 ರಂದು ಮತ್ತೆ ಶಾಲೆ ಆರಂಭವಾದರೆ ರಜೆಯ ಅವಧಿ ಎಷ್ಟು?

ಶಾಲೆ ಆರಂಭವಾದ ದಿನಾಂಕ = 2 3

ಶಾಲೆ ರಜೆ ಘೋಷಿಸಿದ ದಿನಾಂಕ = –0 1

ಶಾಲೆಯ ರಜಾ ಅವಧಿ = 2 2 ದಿನ

ಅಭ್ಯಾಸ ಹಾಳೆ–08

➢ ಮಕ್ಕಳಿಗೆ ಅಭ್ಯಾಸ ಹಾಳೆ–08 ರಲ್ಲಿನ ಲೆಕ್ಕಗಳನ್ನು ಮಾಡುವಂತೆ ತಿಳಿಸೋಣ

**ದತ್ತಾಂಶಗಳ ನಿರ್ವಹಣೆ**

ದತ್ತಾಂಶಗಳನ್ನು ಕಂಬ ನಕ್ಷೆಯಲ್ಲಿ ಸೂಚಿಸುವೆ ಮತ್ತು ಮಾಹಿತಿಯನ್ನು ವಿವರಿಸುವೆ.

**ಚಟುವಟಿಕೆ:01** ಮಕ್ಕಳಿಗೆ ದತ್ತಾಂಶಗಳನ್ನು ಕಂಬ ನಕ್ಷೆಯಲ್ಲಿನ ಮಾಹಿತಿಯನ್ನು ವಿವರಿಸುವುದನ್ನು ಮನವರಿಕೆಮಾಡೋಣ.

**ಮಾದರಿ:01**ಶಾಲಾ ಕೈತೋಟದಲ್ಲಿ ಅರಳಿರುವ ಹೂವುಗಳ ಸಂಖ್ಯೆಯನ್ನು ಕಂಬ ನಕ್ಷೆ ನೀಡಿದೆ. ಇದನ್ನು ವೀಕ್ಷಿಸಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸು.




1) ಕಡಿಮೆ ಸಂಖ್ಯೆಯಲ್ಲಿ ಅರಳಿರುವ ಹೂವು ಯಾವುದು ಮತ್ತು ಎಷ್ಟು? (ಗುಲಾಬಿ–4)
2) ಹೆಚ್ಚಿನ ಸಂಖ್ಯೆಯಲ್ಲಿ ಅರಳಿರುವ ಹೂವು ಯಾವುದು ಮತ್ತು ಎಷ್ಟು? ( ಚೆಂಡುಹೂವು–8)
3) ಒಂದೇ ಸಂಖ್ಯೆಯಲ್ಲಿ ಅರಳಿರುವ ಹೂವುಗಳು ಯಾವುವು ಮತ್ತು ಎಷ್ಟು? (ಸೇವಂತಿಗೆ ಮತ್ತು ದಾಸವಾಳ – 6)
4) ಶಾಲಾ ಕೈತೋಟದಲ್ಲಿ ಅರಳಿರುವ ಒಟ್ಟು ಹೂವುಗಳ ಸಂಖ್ಯೆ ಎಷ್ಟು? (24)

➢ ಮಕ್ಕಳಿಗೆ ಅಭ್ಯಾಸ ಹಾಳೆ–09 ರಲ್ಲಿನ ಲೆಕ್ಕಗಳನ್ನು ಮಾಡುವಂತೆ ತಿಳಿಸೋಣ.

ಅಭ್ಯಾಸ ಹಾಳೆ–09

ತರಗತಿ:–4ನೇ ಅಭ್ಯಾಸ ಹಾಳೆ:01 ತಿಂಗಳು:–ಫೆಬ್ರವರಿ

ಕೆಳಗಿನ ಲೀಟರ್ ಅಳತೆಗಳನ್ನು ಮಿಲಿಲೀಟರ್‌ಗೆ ಪರಿವರ್ತಿಸು.

ಮಾದರಿ:–3 ಲೀಟರ್‌ಅನ್ನು ಮಿಲಿಲೀಟರ್‌ಗೆ ಪರಿವರ್ತಿಸು.

1 ಲೀ = 1000 ಮಿಲೀ

3ಲೀ = 3×1000

= 3000 ಮಿಲೀ

1) 8 ಲೀಟರ್‌ಅನ್ನು ಮಿಲಿಲೀಟರ್‌ಗೆ ಪರಿವರ್ತಿಸು.

2) 4 ಲೀಟರ್‌ಅನ್ನು ಮಿಲಿಲೀಟರ್‌ಗೆ ಪರಿವರ್ತಿಸು.

3) 6 ಲೀಟರ್‌ಅನ್ನು ಮಿಲಿಲೀಟರ್‌ಗೆ ಪರಿವರ್ತಿಸು.

ಮಾದರಿ:–3 ಲೀ 450 ಮಿಲೀಗೆ ಪರಿವರ್ತಿಸು.

1 ಲೀ = 1000 ಮಿಲೀ

3 ಲೀ 450 ಮಿಲೀ = 3×1000 + 450

= 3000 + 450

= 3450 ಮಿಲೀ

1) 4 ಲೀ 670 ಮಿಲೀಗೆ ಪರಿವರ್ತಿಸು.

2) 1 ಲೀ 750 ಮಿಲೀಗೆ ಪರಿವರ್ತಿಸು.

3) 5 ಲೀ 250 ಮಿಲೀಗೆ ಪರಿವರ್ತಿಸು.

ತರಗತಿ:–4ನೇ ಅಭ್ಯಾಸ ಹಾಳೆ:02 ತಿಂಗಳು:–ಫೆಬ್ರವರಿ

**ಕೆಳಗಿನ ಮಿಲಿಲೀಟರ್ ಅಳತೆಗಳನ್ನು ಲೀಟರ್‌ಗೆ ಪರಿವರ್ತಿಸು.**

**ಮಾದರಿ:–2000 ಮಿಲೀನ್ನು ಲೀಟರ್‌ಗೆ ಪರಿವರ್ತಿಸು.**

**2000 ಮಿಲೀ**

**1000 ಮಿಲೀ = 1 ಲೀಟರ್**

**2000 ಮಿಲೀ** $= \frac{2000}{1000} = 2$ **ಲೀ**

1) **5000 ಮಿಲೀನ್ನು ಲೀಟರ್‌ಗೆ ಪರಿವರ್ತಿಸು.**

2) **9000 ಮಿ.ಲೀನ್ನು ಲೀಟರ್‌ಗೆ ಪರಿವರ್ತಿಸು.**

3) **7000 ಮಿ.ಲೀನ್ನು ಲೀಟರ್‌ಗೆ ಪರಿವರ್ತಿಸು.**

**ಮಾದರಿ:–4250 ಮಿಲಿಲೀಟರ್‌ನ್ನು ಲೀಟರ್‌ಗೆ ಪರಿವರ್ತಿಸು.**

**4250 = 4000 + 250**

$= \frac{4000}{1000} + 250$

**= 4 ಲೀ 250 ಮಿಲೀ**

1) **2750 ಮಿಲಿಲೀಟರ್‌ನ್ನು ಲೀಟರ್‌ಗೆ ಪರಿವರ್ತಿಸು.**

2) **6940 ಮಿಲಿಲೀಟರ್‌ನ್ನು ಲೀಟರ್‌ಗೆ ಪರಿವರ್ತಿಸು.**

3) **6940 ಮಿಲಿಲೀಟರ್‌ನ್ನು ಲೀಟರ್‌ಗೆ ಪರಿವರ್ತಿಸು.**

ತರಗತಿ:–4ನೇ  ಅಭ್ಯಾಸ ಹಾಳೆ:03  ತಿಂಗಳು:–ಫೆಬ್ರವರಿ

**ಈ ಕೆಳಗಿನ ಪರಿಮಾಣಗಳನ್ನು ಕೂಡು.**

**ಮಾದರಿ:**

| | | | |
|---|---|---|---|
| 4 5 0 ಲೀ<br>+ 9 8 ಲೀ<br>5 4 8 ಲೀ | 3 5 5 ಮಿಲೀ<br>+ 6 7 8 ಮಿಲೀ<br>______ | 9 9 9 ಲೀ<br>+ 3 7 4 ಲೀ<br>______ | 2 5 0 ಮಿಲೀ<br>+7 8 0 ಮಿಲೀ<br>______ |

| | |
|---|---|
| 6 5 0 ಲೀ 3 6 8 ಮಿಲೀ<br>+ 2 8 7 ಲೀ 9 8 0 ಮಿಲೀ<br>______ | 5 6 ಲೀ 3 0 0 ಮಿಲೀ<br>+ 8 7 ಲೀ 4 0 0 ಮಿಲೀ<br>______ |

**ಮಾದರಿ:01** ರಾಜು ತನ್ನ ಬೈಕ್‌ಗೆ ಸೋಮವಾರ 2 ಲೀ 500 ಮಿಲೀ ಪೆಟ್ರೋಲ್ ಹಾಕಿಸುತ್ತಾನೆ. ಬುಧವಾರ 1 ಲೀ 100 ಮಿಲೀ ಮತ್ತು ಶುಕ್ರವಾರ 2 ಲೀ 400 ಮಿಲೀ ಪೆಟ್ರೋಲ್ ಹಾಕಿಸುತ್ತಾನೆ. ರಾಜು ಮೂರೂ ದಿನ ಹಾಕಿಸಿದ ಒಟ್ಟು ಪೆಟ್ರೋಲ್ ಪ್ರಮಾಣ ಎಷ್ಟು?

| | | |
|---|---|---|
| ಸೋಮವಾರ ಹಾಕಿಸಿದ ಪೆಟ್ರೋಲ್ ಗಾತ್ರ | = | 1 ಲೀ 500 ಮಿಲೀ |
| ಬುಧವಾರ ಹಾಕಿಸಿದ ಪೆಟ್ರೋಲ್ ಗಾತ್ರ | = | 2 ಲೀ 100 ಮಿಲೀ |
| ಶುಕ್ರವಾರ ಹಾಕಿಸಿದ ಪೆಟ್ರೋಲ್ ಗಾತ್ರ | = | 1 ಲೀ 300 ಮಿಲೀ |
| ಒಟ್ಟು ಪೆಟ್ರೋಲ್ ಪ್ರಮಾಣ | = | 5 ಲೀ 900 ಮಿಲೀ |

1) ನೀತಾಳ ಬಳಿ 30 ಲೀ, 45 ಲೀ ಮತ್ತು 58 ಲೀ ಡ್ರಮ್‌ಗಳಿವೆ. ಎಲ್ಲವನ್ನೂ ಸೇರಿಸಿ ಒಟ್ಟು ಎಷ್ಟು ಪ್ರಮಾಣದ ನೀರನ್ನು ಸಂಗ್ರಹಿಸಬಹುದು?

______________________________
______________________________
______________________________
______________________________

2) ಸೀಮೆಎಣ್ಣೆ ವ್ಯಾಪಾರಿಯ ಬಳಿ 155 ಲೀ 500 ಮಿಲೀ ಮತ್ತು 254 ಲೀ 900 ಮಿಲೀ ಅಳತೆಯ ಟ್ಯಾಂಕ್‌ಗಳಿವೆ. ಎರಡೂ ಟ್ಯಾಂಕ್‌ಗಳಲ್ಲಿ ಸೇರಿ ಎಷ್ಟು ಸೀಮೆಎಣ್ಣೆ ಸಂಗ್ರಹಿಸಬಹುದು?

______________________________
______________________________
______________________________
______________________________

ತರಗತಿ:–4ನೇ　　　　　ಅಭ್ಯಾಸ ಹಾಳೆ:04　　　　　ತಿಂಗಳು:–ಫೆಬ್ರವರಿ

**ಮಾದರಿಯಂತೆ ವ್ಯವಕಲನ ಮಾಡು:–**

**ಮಾದರಿ:–**

| | | | |
|---|---|---|---|
| 9 8 0 ಮಿಲೀ<br>– 7 4 0ಮಿಲೀ<br>2 4 0 ಮಿಲೀ | 8 8 0 ಲೀ<br>– 6 9 0ಲೀ<br>______ | 6 8 0 ಮಿಲೀ<br>– 4 7 6ಮಿಲೀ<br>______ | 7 0 0 ಮಿಲೀ<br>– 3 0 0ಮಿಲೀ<br>______ |

| | |
|---|---|
| 5 5 0 ಲೀ 2 5 0 ಮಿಲೀ<br>–3 4 9 ಲೀ 5 0 0 ಮಿಲೀ<br>______ | 4 0 ಲೀ 2 5 0 ಮಿಲೀ<br>– 3 0 ಲೀ 5 0 0 ಮಿಲೀ<br>______ |

1) ಶಾಲೆಯೊಂದರಲ್ಲಿ ತಯಾರಿಸಿದ 2 ಲೀ 500 ಮಿಲೀ ಹಾಲಿನಲ್ಲಿ 2 ಲೀ 450 ಮಿಲೀ ಹಾಲನ್ನು ಮಕ್ಕಳು ಕುಡಿದರೆ ಉಳಿದ ಹಾಲಿನ ಪ್ರಮಾಣ ಎಷ್ಟು?

________________________________

________________________________

________________________________

2) ಹೋಟೆಲ್‌ನಲ್ಲಿದ್ದ 5 ಲೀ 750 ಮಿಲೀ ಹಾಲಿನಲ್ಲಿ 3 ಲೀ 250 ಮಿಲೀ ಹಾಲನ್ನು ಪಾಯಸ ಮಾಡಲು ಬಳಸಿದರೆ ಉಳಿದ ಹಾಲಿನ ಪ್ರಮಾಣ ಎಷ್ಟು?

________________________________

________________________________

________________________________

3) ಅಂಗಡಿಯಲ್ಲಿದ್ದ 6 ಲೀ 150 ಮಿಲೀ ಹಾಲಿನಲ್ಲಿ 2 ಲೀ 150 ಮಿಲೀ ಹಾಲನ್ನು ಮಾರಿದರೆ ಉಳಿದ ಹಾಲಿನ ಪ್ರಮಾಣ ಎಷ್ಟು?

________________________________

________________________________

________________________________

ತರಗತಿ:–4ನೇ ಅಭ್ಯಾಸ ಹಾಳೆ:05 ತಿಂಗಳು:–ಫೆಬ್ರವರಿ

1) ಅಧಿಕ ವರ್ಷದಲ್ಲಿ ಎಷ್ಟು ದಿನಗಳಿರುತ್ತವೆ?

______________________________________________

2) ಅಧಿಕ ವರ್ಷದ ಫೆಬ್ರವರಿ ತಿಂಗಳಲ್ಲಿ ಎಷ್ಟು ದಿನಗಳಿರುತ್ತವೆ?

______________________________________________

3) 2012 ಅಧಿಕ ವರ್ಷವಾದರೆ ಮುಂದಿನ ಅಧಿಕ ವರ್ಷ ಯಾವ ಇಸವಿಯಲ್ಲಿ ಬರುತ್ತದೆ?

______________________________________________

4) ಸೀತಾ ಫೆಬ್ರವರಿ 29 ರಂದು ಜನಿಸಿದ್ದಾಳೆ. ಅವಳು ಎಷ್ಟು ವರ್ಷಕ್ಕೊಮ್ಮೆ ಹುಟ್ಟುಹಬ್ಬ ಆಚರಿಸಿಕೊಳ್ಳಬೇಕು?

______________________________________________

5) 2024 ರಲ್ಲಿ ಎಷ್ಟು ದಿನಗಳಿರುತ್ತವೆ?

______________________________________________

6) ಅಧಿಕ ವರ್ಷವಲ್ಲದ ಫೆಬ್ರವರಿ ತಿಂಗಳಲ್ಲಿ ಎಷ್ಟು ದಿನಗಳಿರುತ್ತವೆ?

______________________________________________

7) ಕೊಟ್ಟಿರುವ ಇಸವಿ ಅಧಿಕ ವರ್ಷವೇ ಅಲ್ಲವೇ ಬಾಕ್ಸ್‌ನಲ್ಲಿ ಬರೆ.

| | |
|---|---|
| 2000 | |
| 1999 | |
| 2012 | |
| 2021 | |
| 2004 | |

ತರಗತಿ:–4ನೇ　　　　　　　　ಅಭ್ಯಾಸ ಹಾಳೆ:06　　　　　　　　ತಿಂಗಳು:–ಫೆಬ್ರವರಿ

ಮಾದರಿಯಂತೆ ಕೆಳಗಿನ ಗಡಿಯಾರಗಳು ತೋರಿಸುವ ಸಮಯವನ್ನು ಓದಿ ಬರೆ.




ನೀಡಿರುವ ಸಮಯಕ್ಕೆ ಅನುಗುಣವಾಗಿ ದೊಡ್ಡ ಮತ್ತು ಚಿಕ್ಕಮುಳ್ಳುಗಳನ್ನು ಬರೆ.




2 : 45　　　　12 : 15　　　　3 : 00




5 : 30    7 : 55    9 : 20

ತರಗತಿ:–4ನೇ    ಅಭ್ಯಾಸ ಹಾಳೆ:07    ತಿಂಗಳು:–ಫೆಬ್ರವರಿ

ಮಾದರಿಯಂತೆ ಕೊಟ್ಟಿರುವ ಸಮಯವನ್ನು ಪೂರ್ವಾಹ್ನ ಅಥವಾ ಅಪರಾಹ್ನಗಳಲ್ಲಿ ಬರೆ.

| 15 ಗಂಟೆ | ಅಪರಾಹ್ನ |
|---|---|
| ಸಂಜೆ 4 : 30 | |
| ಬೆಳಗ್ಗೆ 10: 45 | |
| 23 : 15 | |
| 6 : 25 | |

ಮಾದರಿ:01 ರೈಲು ವೇಳಾಪಟ್ಟಿಯಲ್ಲಿ ಹೊರಡುವ ಸಮಯ 18:00 ಗಂಟೆ ಎಂದು ನಮೂದಿಸಿದೆ. 12 ಗಂಟೆ ಗಡಿಯಾರದಲ್ಲಿ ಸಮಯವೆಷ್ಟು?

ರೈಲು ಹೊರಡುವ ವೇಳೆ = 18:00 – 12:00

= 6:00pm (ಅಪರಾಹ್ನ 6 ಗಂಟೆ)

1) ವಿಮಾನ ತಲುಪುವ ಸಮಯ 23:00 ಗಂಟೆ ಎಂದು ನಮೂದಿಸಿದೆ. ಇದನ್ನು 12 ಗಂಟೆ ಗಡಿಯಾರದ ಸಮಯದಲ್ಲಿ ಬರೆ?

2) ಶಶಿ ಪ್ರತಿ ದಿನ ರಾತ್ರಿ ಊಟವನ್ನು 20:30 ಗಂಟೆಗೆ ಮಾಡಿದರೆ, 12 ಗಂಟೆ ಗಡಿಯಾರದಲ್ಲಿ ಎಷ್ಟು ಸಮಯವಾಗಿರುತ್ತದೆ?

3) ರೈಲು ತಲುಪುವ ವೇಳೆ 19:45 ಗಂಟೆ ಎಂದು ಟಿಕೆಟ್‌ನಲ್ಲಿ ನಮೂದಾಗಿದೆ. ಈ ಸಮಯವನ್ನು 12 ಗಂಟೆ ಗಡಿಯಾರದಲ್ಲಿ ಬರೆ?

ತರಗತಿ:–4ನೇ　　ಅಭ್ಯಾಸ ಹಾಳೆ:08　　ತಿಂಗಳು:–ಫೆಬ್ರವರಿ

ಮಾದರಿ:01ಜಾತ್ರೆ ಪ್ರಯುಕ್ತ ಶಾಲೆಗೆ ಜೂನ್ 25 ರಿಂದ ರಜೆ ಘೋಷಿಸಲಾಗಿತ್ತು. ರಜೆಯ ನಂತರ ಜೂನ್ 30 ರಂದು ಮತ್ತೆ ಶಾಲೆ ಆರಂಭವಾದರೆ ರಜೆಯ ಅವಧಿ ಎಷ್ಟು?

ಶಾಲೆ ಆರಂಭವಾದ ದಿನಾಂಕ = 3 0
ಶಾಲೆ ರಜೆ ಘೋಷಿಸಿದ ದಿನಾಂಕ = –2 5
ಶಾಲೆಯ ರಜಾ ಅವಧಿ = 05 ದಿನ

1) ಕಲಾ ಮೇ 2 ರಂದು ಅಜ್ಜಿಯ ಊರಿಗೆ ಹೋಗಿ ಪುನಃ ಮೇ 24 ರಂದು ಹಿಂದಿರುಗುತ್ತಾಳೆ. ಅವಳು ಎಷ್ಟು ದಿನ ಅಜ್ಜಿಯ ಮನೆಯಲ್ಲಿದ್ದಳು?

2) ಅಬ್ದುಲ್ ಒಂದು ಪೇಂಟಿಂಗ್‌ನ್ನು ಜನವರಿ 7 ರಂದು ಆರಂಭಿಸಿ ಜನವರಿ 29 ಕ್ಕೆ ಮುಗಿಸುತ್ತಾನೆ. ಆ ಪೇಂಟಿಂಗ್ ಮಾಡಲು ತೆಗೆದುಕೊಂಡ ಅವಧಿ ಎಷ್ಟು?

3) ಮೇರಿಯ ಪರೀಕ್ಷೆ ಮಾರ್ಚ್ 8 ಕ್ಕೆ ಆರಂಭವಾಗಿ 6 ದಿನಗಳ ಕಾಲ ನಡೆಯುತ್ತದೆ. ಅವಳ ಪರೀಕ್ಷೆ ಮುಗಿದ ದಿನಾಂಕ ಯಾವುದು?

4) ಕನಕ ಭತ್ತದ ಕಟಾವ್‌ನ್ನು ಡಿಸೆಂಬರ್ 15 ಕ್ಕೆ ಆರಂಭಿಸಿ ಡಿಸೆಂಬರ್ 25 ಕ್ಕೆ ಮುಗಿಸುತ್ತಾನೆ. ಅವನು ಒಟ್ಟು ಎಷ್ಟು ದಿನ ಕಟಾವ್ ಮಾಡಿದಂತಾಗುತ್ತದೆ?

ತರಗತಿ:–4ನೇ ಅಭ್ಯಾಸ ಹಾಳೆ:09 ತಿಂಗಳು:–ಫೆಬ್ರವರಿ

1. ಚಿತ್ರ ನೋಡಿ ಕೋಷ್ಟದಲ್ಲಿ ಆಯಾ ಹಣ್ಣುಗಳ ಸಂಖ್ಯೆಯನ್ನು ಬರೆ ಮತ್ತು ಪ್ರಶ್ನೆಗಳಿಗೆ ಉತ್ತರಿಸು.



1) ಕಡಿಮೆ ಸಂಖ್ಯೆಯಲ್ಲಿರುವ ಹಣ್ಣು ಯಾವುದು?
2) ಹೆಚ್ಚು ಸಂಖ್ಯೆಯಲ್ಲಿರುವ ಹಣ್ಣು ಯಾವುದು?
3) ಸಮ ಸಂಖ್ಯೆಯಲ್ಲಿರುವ ಹಣ್ಣುಗಳು ಯಾವುವು?
4) ಒಟ್ಟು ಎಷ್ಟು ಹಣ್ಣುಗಳಿವೆ?

2. ಒಂದು ಅಂಗಡಿಯಲ್ಲಿರುವ ಆಟಿಕೆಗಳ ಸಂಖ್ಯೆಗಳನ್ನು ಕಂಬ ನಕ್ಷೆಯಲ್ಲಿ ಸೂಚಿಸಿದೆ. ಅದನ್ನು ವೀಕ್ಷಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.




1) ಸಮ ಸಂಖ್ಯೆಯಲ್ಲಿರುವ ಆಟಿಕೆಗಳು ಯಾವುವು ಮತ್ತು ಎಷ್ಟು?

2) ಇವುಗಳಲ್ಲಿ ನಿನಗೆ ಇಷ್ಟವಾದ ಆಟಿಕೆ ಯಾವುದು ಮತ್ತು ಅವು ಎಷ್ಟಿವೆ?

3) ನೀಲಿ ಬಣ್ಣದಲ್ಲಿ ಸೂಚಿಸಿರುವ ಆಟಿಕೆ ಯಾವುದು?

4) ಹಸಿರು ಬಣ್ಣದಲ್ಲಿ ಸೂಚಿಸಿರುವ ಆಟಿಕೆಗಳು ಎಷ್ಟಿವೆ?

5) ಕೇರಂಬೋರ್ಡ್ ಆಟಿಕೆಯನ್ನು ಯಾವ ಬಣ್ಣದಿಂದ ಸೂಚಿಸಿದೆ?

6) ಅತಿ ಹೆಚ್ಚು ಸಂಖ್ಯೆಯಲ್ಲಿರುವ ಆಡಿಕೆ ಯಾವುದು ಮತ್ತು ಎಷ್ಟು?